**<u>ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ ಹಾಗೂ ಡಿ.ಟಿ ಶ್ರೀನಿವಾಸ್ ಇವರು ನಿಯಮ 330ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.</u>**

**ಸೂಚನೆ:-**

ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯಲ್ಲಿ 2002ರ ಮತದಾರರ ಪಟ್ಟಿಗೆ 2025ರ ಮತದಾರರ ಪಟ್ಟಿಗೆ ಮ್ಯಾಪಿಂಗ್ ಮಾಡಲು ಬಿ.ಎಲ್.ಓಗಳಾಗಿ ಹಾಗು ಮನೆ ಮನೆ ಸಮೀಕ್ಷೆಗೆ ಪ್ರಾಥಮಿಕ ಹಾಗು ಪ್ರೌಢಶಾಲಾ ಶಿಕ್ಷಕರನ್ನು ನೇಮಕ ಮಾಡಲಾಗಿದ್ದು ಎಲ್ಲರು ಸಹ ಸಮೀಕ್ಷಾ ಕಾರ್ಯವನ್ನು ಮಾಡುತ್ತಿದ್ದಾರೆ. ಪ್ರಸ್ತುತ ಎಸ್.ಎಸ್.ಎಲ್.ಸಿ ಮತ್ತು 8 ಮತ್ತು 9ನೇ ತರಗತಿಗಳ ಪರೀಕ್ಷೆಗಳು ಪ್ರಾರಂಭವಾಗಿವೆ. ಆದರೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಕಂದಾಯ ಅಧಿಕಾರಿಗಳು ಪ್ರತಿದಿನ ಪ್ರೌಢಶಾಲಾ ಶಿಕ್ಷಕರಿಗೆ ಮುಖ್ಯಶಿಕ್ಷಕರಿಗೆ ನೋಟಿಸ್ ನೀಡಿ ನೀವು ಕೂಡಲೇ ಕರ್ತವ್ಯಕ್ಕೆ ಹಾಜರಾಗದಿದ್ದರೆ ನಿಮ್ಮ ಮೇಲೆ ಶಿಸ್ತು ಕ್ರಮ ಕೈಗೊಂಡು ಅಮಾನತ್ತು ಮಾಡಲಾಗುತ್ತದೆ ಎಂದು ದೂರವಾಣಿ ಮೂಲಕ ಮತ್ತು ಖುದ್ದು ಶಾಲೆಗಳಿಗೆ ಹೋಗಿ ಬೆದರಿಕೆ ಹಾಕುತ್ತಿದ್ದಾರೆ. ಇದರಿಂದ ಪ್ರೌಢಶಾಲೆಗಳ ಶಿಕ್ಷಕರು ತುಂಬಾ ಆತಂಕಕ್ಕೆ ಒಳಗಾಗುತ್ತಿದ್ದು ಶಾಲೆಯಲ್ಲಿ ಕರ್ತವ್ಯವನ್ನು ನಿರ್ವಹಿಸಲು ಸಾಧ್ಯವಾಗದಿರುವಂತಹ ಸ್ಥಿತಿ ಅಧಿಕಾರಿಗಳಿಂದ ತೊಂದರೆ ಆಗಿದೆ. ಪ್ರಸ್ತುತ ಮಾರ್ಚ್ ಏಪ್ರಿಲ್ ತಿಂಗಳಿನಲ್ಲಿ 8,9 ಮತ್ತು 10 ನೇ ತರಗತಿಗಳ ಪರೀಕ್ಷೆಗಳು ಹಾಗು ಪರೀಕ್ಷೆ ನಂತರ ಮೌಲ್ಯಮಾಪನ ಕಾರ್ಯವನ್ನು ಮಾಡುವ ಕೆಲಸವನ್ನು ಮಾಡಲೇಬೇಕಾಗಿದೆ. ಈಗಾಗಲೇ ಶಿಕ್ಷಣ ಇಲಾಖೆಯ ಅಧಿಕಾರಿಗಳು ಸಮೀಕ್ಷಾ ಕಾರ್ಯಕ್ಕೆ ಪ್ರೌಢಶಾಲಾ ಶಿಕ್ಷಕರ ಬದಲಿಗೆ ಪ್ರಾಥಮಿಕ ಶಾಲಾ ಶಿಕ್ಷಕರು ಹಾಗು ವಿಷಯ ಶಿಕ್ಷಕರನ್ನು ಹೊರತುಪಡಿಸಿ ಇತರೆ ಶಿಕ್ಷಕರನ್ನು ನೇಮಿಸುವಂತೆ ಬದಲಿ ಶಿಕ್ಷಕರ ಪಟ್ಟಿಯನ್ನು ಕೊಟ್ಟಿರುತ್ತಾರೆ. ಆದರೂ ಸಹ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರಿಗಳು ಪರೀಕ್ಷೆ ನಡೆಯುತ್ತಿರುವ ಈ ಸಂದರ್ಭದಲ್ಲಿ ಪ್ರೌಢಶಾಲಾ ಶಿಕ್ಷಕರಿಗೆ ಪ್ರತಿದಿನ ನೋಟಿಸ್‌ಗಳನ್ನು ನೀಡಿ ಹೆದರಿಸುತ್ತಿರುವುದರಿಂದ ಶಿಕ್ಷಕರು ತುಂಬಾ ಆತಂಕಕ್ಕೆ ಒಳಗಾಗಿದ್ದಾರೆ. ಆದ್ದರಿಂದ 2002ರ ಮತದಾರರ ಪಟ್ಟಿಗೆ 2025ರ ಮತದಾರರ ಪಟ್ಟಿಗೆ ಮ್ಯಾಪಿಂಗ್ ಮಾಡಲು ಬಿ.ಎಲ್.ಓಗಳಾಗಿ ಹಾಗು ಮನೆ ಮನೆ ಸಮೀಕ್ಷೆಗೆ ಪ್ರೌಢಶಾಲಾ ಶಿಕ್ಷಕರನ್ನು ಹೊರತುಪಡಿಸಿ ಇತರೆ ಇಲಾಖೆಗಳ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಅಧಿಕಾರಿಗಳಿಗೆ ನಿರ್ದೇಶನ ನೀಡುವ ಬಗ್ಗೆ.

**<u>ಉತ್ತರ:</u>**

- ಜಿಲ್ಲಾ ಚುನಾವಣಾಧಿಕಾರಿಗಳು-ಬೆಂಗಳೂರು ವ್ಯಾಪ್ತಿಯಲ್ಲಿ ಒಟ್ಟು 8972 ಮತಗಟ್ಟೆಗಳಿದ್ದು, ಈ ಪೈಕಿ 4387 ಸಂಖ್ಯೆಯ ಮತಗಟ್ಟೆಗಳಲ್ಲಿ ಶಿಕ್ಷಣ ಇಲಾಖೆ ವತಿಯಿಂದ ಬಿ.ಎಲ್.ಓ.ಗಳಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ.
- Manual on Electoral Rolls, March 2023, Document 10- Edition 2" ಕಂಡಿಕೆ 5.2.5 (ಇ) ರಲ್ಲಿ ರಜೆ ದಿನಗಳಲ್ಲಿ, ಬೋಧಕೇತರ ಸಮಯ ಮತ್ತು ಬೋಧಕೇತರ ದಿನಗಳಲ್ಲಿ ಶಿಕ್ಷಕರನ್ನು ಬೂತ್ ಮಟ್ಟದ ಅಧಿಕಾರಿಗಳನ್ನಾಗಿ ನಿಯೋಜನೆ ಮಾಡಲು ಅವಕಾಶವಿರುತ್ತದೆ.

. . .2.

- ಪ್ರಸ್ತುತ, ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ Special Intensive Revision (SIR) ಪೂರ್ವಭಾವಿ ಚಟುವಟಿಕೆಯಾದ 2002ರ ಮತದಾರರನ್ನು 2025ರ ಮತದಾರರ ಪಟ್ಟಿಯೊಂದಿಗೆ ಜೋಡಣೆ (Mapping) ಕಾರ್ಯವು ಪ್ರಗತಿಯಲ್ಲಿದ್ದು, ಪ್ರಸ್ತುತ, ಜಿಲ್ಲಾ ಚುನಾವಣಾಧಿಕಾರಿಗಳು-ಬೆಂಗಳೂರು ಜಿಲ್ಲೆಯು ರಾಜ್ಯದ ಇತರೇ ಜಿಲ್ಲೆಗಳ ಪ್ರಗತಿಗೆ ಹೋಲಿಸಿದ್ದಲ್ಲಿ ಅತ್ಯಂತ ಕನಿಷ್ಠ ಮಟ್ಟದ ಪ್ರಗತಿ ಜಿಲ್ಲೆ ಆಗಿರುತ್ತದೆ.
- ಭಾರತ ಚುನಾವಣಾ ಆಯೋಗ ಪತ್ರ ಸಂಖ್ಯೆ: 23/2025-ಇಆರ್ಎಸ್ (vol-I) ದಿನಾಂಕ: 19-02-2026 ರಲ್ಲಿ ಭಾಗಶಃ ಏಪ್ರಿಲ್ ಮೊದಲನೇ ವಾರದಲ್ಲಿ ಕರ್ನಾಟಕದಲ್ಲಿ (SIR) ಚಟುವಟಿಕೆಗಳನ್ನು ಜಾರಿಮಾಡಲಾಗುವುದೆಂದು ತಿಳಿಸಿರುವುದರಿಂದ ಮ್ಯಾಪಿಂಗ್ ಚುರುಕುಗೊಳಿಸಿ ಮಾರ್ಚ್ ಅಂತ್ಯದವರೆಗೆ ಪೂರ್ಣ ಪ್ರಮಾಣದ ಪ್ರಗತಿಯನ್ನು ಸಾಧಿಸಬೇಕಾಗಿರುವ ಅವಶ್ಯಕತೆ ಇರುತ್ತದೆ.
- ಮೇಲ್ಕಂಡ ಹಿನ್ನೆಲೆಯಲ್ಲಿ, ಪ್ರಗತಿ ಸಾಧಿಸದ ಎಲ್ಲಾ ಇಲಾಖೆಗಳ ಬಿ.ಎಲ್.ಓ. ರವರಿಗೆ ನಿಯಮಾನುಸಾರ ಮತದಾರರ ನೋಂದಣಾಧಿಕಾರಿಗಳು ನೋಟೀಸ್ ನೀಡಿರುತ್ತಾರೆ.
- ಪ್ರಸ್ತುತ (SIR) ಪೂರ್ವಭಾವಿ ಚಟುವಟಿಕೆ ಕಾರ್ಯಗಳು ಚಾಲ್ತಿಯಲ್ಲಿರುವ ಕಾರಣ ನಿಗದಿತ ಅವಧಿಯೊಳಗೆ ಮುಕ್ತಾಯಗೊಳಿಸಬೇಕಾದ ಅವಶ್ಯಕತೆಯಿರುವುದರಿಂದ ಶಿಕ್ಷಕರ ಪಾತ್ರವು ನಿರ್ಣಾಯಕವಾಗಿದ್ದು, ಬಿ.ಎಲ್.ಓ. ಕರ್ತವ್ಯದಿಂದ ಕೈಬಿಡಲು ಕಷ್ಟಸಾಧ್ಯವಾಗಿರುತ್ತದೆ.

ಸಂಖ್ಯೆ: ನಅಇ 135 ಎಂಎನ್‌ಯು 2026

(ಡಿ.ಕೆ.ಶಿವಕುಮಾರ್)
ಉಪ ಮುಖ್ಯಮಂತ್ರಿ